# ಹೊಳಲ್ಕೆರೆಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ

## ಸಿ.ಸಿ. ನಂಃ 670/2021

**ಫಿರ್ಯಾದಿ** : ಸರ್ಕಾರದ ಪರವಾಗಿ - ಚಿತ್ರಹಳ್ಳಿಗೇಟ್ ಪೋಲೀಸರು.

- ವಿರುದ್ಧ -

**ಆರೋಪಿತರುಃ** ಸತೀಶ ಮತ್ತು ಇತರರು.

## -:: ದೋಷಾರೋಪಣೆ ::-

ನಾನು ನಿರುಪಮಾ ರೇಣಕಪ್ಪ ಢಂಗ, ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಳಲ್ಕೆರೆ, ಆದ ನಾನು ನಿಮ್ಮ ಮೇಲೆ ಅಂದರೆ,

1. ಸತೀಶ ತಂದೆ ಪಾಂಡು,
   ಸು.23 ವರ್ಷಗಳು, ವೃತ್ತಿಃ ಕೂಲಿ ಕೆಲಸ.
   ವಾಸಃ ಬೊಮ್ಮೇನಹಳ್ಳಿ ಗ್ರಾಮ,
   ಹಿರೇಗುಂಟನೂರು ಹೋಬಳಿ,
   ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ.

2. ಸಚಿನ್ ತಂದೆ ನಾರಾಯಣಪ್ಪ,
   ಸು.22 ವರ್ಷಗಳು, ವೃತ್ತಿಃ ಕೂಲಿ ಕೆಲಸ.
   ವಾಸಃ # ನಂ.533, ಧರ್ಮಾವರಂ ಬೀದಿ,
   ಚಿಕ್ಕನಾಯಕನಹಳ್ಳಿ ಟೌನ್,
   ತುಮಕೂರು ಜಿಲ್ಲೆ.

3. ಮೊಹಮ್ಮದ್ ಸಾದಿಖ್ ವುಲ್ಲಾ ತಂದೆ ಅಬ್ದುಲ್ ರಷೀದ್,
   ಸು.33 ವರ್ಷಗಳು, ವೃತ್ತಿಃ ಗುಜರಿ ವ್ಯಾಪಾರಿ.
   ವಾಸಃ ಮಸೀದಿ ಆಜಂ ಹತ್ತಿರ, ಹೊರಪೇಟೆ,
   ಚಿತ್ರದುರ್ಗ ಟೌನ್.

4. ಅಕ್ರಂ ಪಾಷ ತಂದೆ ಲೇಟ್.ಅಸ್ಲಾಂ ಪಾಷ,
   ಸು.46 ವರ್ಷಗಳು, ವೃತ್ತಿಃ ಬ್ಯಾಟರಿ ವ್ಯಾಪಾರಿ.
   ವಾಸಃ ಆರ್.ಎಂ.ಎಲ್ ನಗರ,
   ಹೆಚ್.ಪಿ.ಎಸ್ ಕಿದ್ವಾಯಿ ಮಿಡ್ಲ್ ಸ್ಕೂಲ್ ಹತ್ತಿರ,
   ಶಿವಮೊಗ್ಗ ಟೌನ್, ಶಿವಮೊಗ್ಗ ಜಿಲ್ಲೆ.

**ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ, ದಿನಾಂಕಃ 21.02.2019 ರಂದು ರಾತ್ರಿ 11.45 ಗಂಟೆ ಸಮಯದಲ್ಲಿ ಅಮೃತಾಪುರ ಗ್ರಾಮದ ರಿ.ಸ.ನಂ.41/2 ರ ಜಮೀನಿನಲ್ಲಿ ಅಳವಡಿಸಿರುವ KARQHB 0621 ನೇ ಸೈಟಿನ ಟವರ್ ನಲ್ಲಿ ಅಳವಡಿಸಿದ್ದ ಸುಮಾರು 2,00,000/- ರೂ ಮೌಲ್ಯದ ಅಮರರಾಜ ಕಂಪನಿಯ 600 ಎ.ಹೆಚ್. ನ ಬ್ಯಾಟರಿ ಬ್ಯಾಂಕ್ 48 ಬ್ಯಾಟರಿ ಶೆಲ್ ಗಳನ್ನು 1 ನೇ ಮತ್ತು 2 ನೇ ಆರೋಪಿತರಾದ ನೀವುಗಳು ಕಳ್ಳತನ ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 379 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು, ಕಳ್ಳತನ ಮಾಡುವ ಸಮಾನ ಉದ್ದೇಶದಿಂದ, 1 ನೇ ಆರೋಪಿ ಮತ್ತು 2 ನೇ ಆರೋಪಿತರ ಪ್ರಚೋದನೆಯಿಂದ 3 ನೇ ಆರೋಪಿಯಾದ ನೀನು ಅಮೃತಾಪುರ ಗ್ರಾಮದ ರಿ.ಸ.ನಂ.41/2 ರ ಜಮೀನಿನಲ್ಲಿ ಅಳವಡಿಸಿರುವ KARQHB 0621 ನೇ ಸೈಟಿನ ಟವರ್ ನಲ್ಲಿ ಅಳವಡಿಸಿದ್ದ ಸುಮಾರು 2,00,000/- ರೂ ಮೌಲ್ಯದ ಅಮರರಾಜ ಕಂಪನಿಯ 600 ಎ.ಹೆಚ್. ನ ಬ್ಯಾಟರಿ ಬ್ಯಾಂಕ್ 48 ಬ್ಯಾಟರಿ ಶೆಲ್ ಗಳನ್ನು ಆರೋಪಿತರಾದ ನೀವುಗಳು ಕಳ್ಳತನ ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 109 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು, ಕಳ್ಳತನ ಮಾಡುವ ಸಮಾನ ಉದ್ದೇಶದಿಂದ, ಸದರಿ ಬ್ಯಾಟರಿಗಳನ್ನು 3 ನೇ ಆರೋಪಿಯಾದ ನೀನು, 1 ಮತ್ತು 2 ನೇ ಆರೋಪಿತರು ಕಳ್ಳತನ ಮಾಡಿದ ವಸ್ತುಗಳು ಎಂದು ಗೊತ್ತಿದ್ದರು ಸಹ ಕಳ್ಳತನದ ಮಾಲುಗಳನ್ನು 4 ನೇ ಆರೋಪಿಗೆ ಅಪ್ರಾಮಾಣಿಕತೆಯಿಂದ ಮಾರಾಟ ಮಾಡಿ ಒಂದು ಲಕ್ಷ ರೂ. ನಗದು ಹಣವನ್ನು ಪಡೆದು, 4 ನೇ ಆರೋಪಿಯಾದ ನೀನು ಸದರಿ ಬ್ಯಾಟರಿ ಶೆಲ್ ಗಳು ಕಳ್ಳತನದ ಮಾಲುಗಳು ಎಂದು ತಿಳಿದಿದ್ದರೂ ಸಹ 3 ನೇ ಆರೋಪಿಯು ಬಳಿ ಅಪ್ರಾಮಾಣಿಕವಾಗಿ ಸ್ವೀಕರಿಸಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 411 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

14/11/2022

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹೊಳಲ್ಕೆರೆ.

**ದಿಃ 14.11.2022**